ಶ್ರೀ ಹೆಚ್. ಹಾಲಪ್ಪ (ಆಹಾರ, ನಾಗರೀಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಸಚಿವರು) :

ಅ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ, ದಿನಾಂಕ: 31–03–2008 ರವರೆಗೆ, 6,378 ಎಎವೈ, 26,651 ಬಿಪಿಎಲ್ ಮತ್ತು 21,167 ಎಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಆ) ತೀರ್ಥಹಳ್ಳಿ ವಿಧಾನಸಭಾ ಕ್ಷೇತ್ರದಲ್ಲಿ, 2008 ಜುಲೈ ತಿಂಗಳಿನಿಂದ ಈವರೆಗೆ 3,966 ಬಿಪಿಎಲ್ ಮತ್ತು 457 ಎಪಿಎಲ್ ಪಡಿತರ ಚೀಟಿಗಳನ್ನು ವಿತರಿಸಲಾಗಿದೆ.

ಇ) ಇಲ್ಲ.

ಈ) ಅನ್ವಯಿಸುವುದಿಲ್ಲ.

ಪಡಿತರ ಚೀಟಿಗಳಲ್ಲಿ ಯಾವುದೇ ತಪ್ಪುಗಳಿದ್ದಲ್ಲಿ ತಾಲ್ಲೂಕು ಮಟ್ಟದ ಬ್ಯಾಕ್ ಆಫೀಸ್‌ಗಳಲ್ಲಿ ಅರ್ಜಿ ನೀಡಿ ತಿದ್ದುಪಡಿ ಮಾಡಲು ಅವಕಾಶ ನೀಡಲಾಗುತ್ತಿದೆ.

ತೋಟಗಾರಿಕೆ ಇಲಾಖೆ ವಿವರಣೆ

999 (980) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಶಿವಮೊಗ್ಗದಲ್ಲಿ ನೂತನವಾಗಿ ತೋಟಗಾರಿಕಾ ವಿಶ್ವವಿದ್ಯಾ ನಿಲಯ ಪ್ರಾರಂಭ ಮಾಡುವ ಯೋಜನೆ ಸರ್ಕಾರದ ಮುಂದಿದೆಯೇ;

ಆ) ತೀರ್ಥಹಳ್ಳಿ ಶೃಂಗೇರಿ ಮತ್ತು ಮೂಡಿಗೆರೆ ಅಡಿಕೆ ಸಂಶೋಧನಾ ಕೇಂದ್ರಗಳನ್ನು ಬೆಂಗಳೂರು ಕೃಷಿ ವಿಶ್ವವಿದ್ಯಾನಿಲಯಕ್ಕೆ ಅಥವಾ ನೂತನವಾಗಿ ಆರಂಭಿಸುವ ಶಿವಮೊಗ್ಗ ವಿಶ್ವವಿದ್ಯಾನಿಲಯಕ್ಕೆ ಬಾಗಲಕೋಟೆ ತೋಟಗಾರಿಕೆ ವಿಶ್ವವಿದ್ಯಾನಿಲಯದಿಂದ ಬೇರ್ಪಡಿಸಿ ಸೇರಿಸುವುದರಿಂದ ಆಗುವ ಅನಾನುಕೂಲತೆಗಳೇನು?

ಶ್ರೀ ಉಮೇಶ್ ಎ. ಕತ್ತಿ (ತೋಟಗಾರಿಕೆ ಮತ್ತು ಬಂಧಿಖಾನೆ ಸಚಿವರು) :

ಅ) ಇಲ್ಲ.

ಆ)

1) ತೋಟಗಾರಿಕೆ ಬೆಳೆಗಳ ಸಂಶೋಧನೆ ಬಗ್ಗೆ ಕೇಂದ್ರೀಕೃತ ಗಮನ ಹರಿಸಲು ಸಾಧ್ಯವಾಗುವುದಿಲ್ಲ.

2) ಸದರಿ ಬೆಳೆಗಳಿಗೆ ಆಧ್ಯತೆ ಮೇರೆಗೆ ಅನುದಾನ ಒದಗಿಸಲು ಸಾಧ್ಯವಾಗುವುದಿಲ್ಲ.

3) ಪ್ರತ್ಯೇಕವಾಗಿ ತೋಟಗಾರಿಕೆ ವಿಜ್ಞಾನಗಳ ವಿಶ್ವವಿದ್ಯಾನಿಲಯ ಸ್ಥಾಪನೆಗೊಂಡಿರುವುದರಿಂದ ಆಡಳಿತಾತ್ಮಕವಾಗಿ ಕಾರ್ಯನಿರ್ವಹಿಸುವಲ್ಲಿ ಅನಾನುಕೂಲವಾಗುತ್ತದೆ.

ಭೂಚೇತನ ಮಾರ್ಗಸೂಚಿ

1000 (1109) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಕೃಷಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರವು ಜಾರಿಗೆ ತಂದಿರುವ ಭೂಚೇತನ ಕಾರ್ಯಕ್ರಮದ ಮಾರ್ಗಸೂಚಿಯ ವರದಿಯು ಸಿದ್ದವಿದೆಯೇ;

ಆ) ಈ ಯೋಜನೆಗಾಗಿ ಎಷ್ಟು ಜಿಲ್ಲೆಗಳ ಜಮೀನುಗಳನ್ನು ಒಳಪಡಿಸಲು ಉದ್ದೇಶಿಸಲಾಗಿದೆ; ರಾಜ್ಯಾದ್ಯಂತ ಈ ಕಾರ್ಯಕ್ರಮವನ್ನು ಎಂದು ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು?

ಶ್ರೀ ಎಸ್.ಎ. ರವೀಂದ್ರನಾಥ್ (ಕೃಷಿ ಸಚಿವರು) :

ಅ) ಸರ್ಕಾರವು ಜಾರಿಗೆ ತಂದಿರುವ ಭೂಚೇತನ ಕಾರ್ಯಕ್ರಮದ ಮಾರ್ಗಸೂಚಿಯ ವರದಿಯು ಸಿದ್ದವಿದೆ.

ಆ) ಈ ಯೋಜನೆಗಾಗಿ 24 ಜಿಲ್ಲೆಗಳ ಖುಷ್ಕಿ ಜಮೀನುಗಳನ್ನು ಒಳಪಡಿಸಲು ಉದ್ದೇಶಿಸಲಾಗಿದೆ. ರಾಜ್ಯಾದ್ಯಂತ ಈ ಕಾರ್ಯಕ್ರಮವನ್ನು 2012–13ಕ್ಕೆ ಸಂಪೂರ್ಣವಾಗಿ ಅನುಷ್ಠಾನಗೊಳಿಸಲಾಗುವುದು.

1002 (1111) ಶ್ರೀ ಕಿಮ್ಮನೆ ರತ್ನಾಕರ್ (ತೀರ್ಥಹಳ್ಳಿ) : ಮಾನ್ಯ ಆಹಾರ, ನಾಗರಿಕ ಸರಬರಾಜು ಮತ್ತು ಗ್ರಾಹಕರ ವ್ಯವಹಾರಗಳ ಇಲಾಖೆ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸಾರ್ವಜನಿಕ ವಿತರಣೆ ವ್ಯವಸ್ಥೆಯಡಿಯಲ್ಲಿ "ಅಕ್ಕಿ ಸಂತೆ" ಗಳ ಮೂಲಕ ಎಷ್ಟು ಪ್ರಮಾಣದ ಅಕ್ಕಿಯನ್ನು ಯಾವ ದರದಲ್ಲಿ ವಿತರಿಸಲಾಗಿದೆ;

ಯಾವ್ಯಾವ ಸ್ಥಳಗಳಲ್ಲಿ ವಿತರಿಸಲಾಗಿದೆ;